**ಇಂದು ದಿಃ 29-11-2022 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಬಿ.ಎಂ. ಎಸ್ ವಕೀಲರಿಂದಃ**

ನಾನು ಶಾಲೆ ಕಲಿತಿರುವುದಿಲ್ಲ. ನಿ.ಡಿ-44 ನನ್ನ ಶಾಲಾ ದೃ.ಪತ್ರ ಎಂದರೆ ಸರಿ. ನಾನು 1 ನೇ ತರಗತಿಯವರೆಗೆ ಹೋಗಿರಬಹುದು. 1 ನೇ ಪ್ರತಿವಾದಿ ಮನೆ ಬಿಟ್ಟು ಹೋದಾಗ, ನಾನು ಶಾಲೆ ಬಿಟ್ಟಿದ್ದೆನು. ಜನತಾ ನಿವೇಶನ ಮಂಜೂರಾದಾಗ ನಮ್ಮ ತಂದೆ ಮತ್ತು ಆತನ ಸಹೋದರರು ಬೇರೆ ಬೇರೆಯಾಗಿ ವಾಸಮಾಡುತ್ತಿದ್ದರು. ಜನತಾ ನಿವೇಶನ ಯಾವಾಗ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವರ್ಷ ಮನೆ ಕಟ್ಟಿ ವಾಸ ಮಾಡುತ್ತಾ ಬಂದಿದ್ದೇವೆಂದು, ನನಗೆ ವರ್ಷ ನೆನಪಿರುವುದಿಲ್ಲ. 1 ನೇ ಪ್ರತಿವಾದಿ ಚಿಕ್ಕ ವಯಸ್ಸಿನಲ್ಲಿ ಏಕೆ ಮನೆ ಬಿಟ್ಟು ಹೋಗಿದ್ದಾನೆಂದು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಯಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಮನೆ ಬಿಟ್ಟು ಹೋಗಿ, ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಜನತಾ ನಿವೇಶನದಲ್ಲಿ 1 ನೇ ಪ್ರತಿವಾದಿ ಗುಡಿಸಲು ಕಟ್ಟಿಕೊಂಡು ಇದ್ದರು. 1 ನೇ ಪ್ರತಿವಾದಿ ಮನೆ ಬಿಟ್ಟು ಹೋದ ತಕ್ಷಣ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಾ ಬಂದಿದ್ದಾರೆ. ನಮ್ಮ ತಂದೆಗೆ ವಿಭಾಗದ ಮೂಲಕ ಆಸ್ತಿಗಳ ಬಗ್ಗೆ ನನಗೆ ಗೊತ್ತಿದೆ, ಆದರೆ ಸರ್ವೆ ನಂಬರ್ ಹೇಳಲಾಗುವುದಿಲ್ಲ. ನಮ್ಮ ತಂದೆಗೆ 3 ಕಾಲು ಎಕರೆ ಜಮೀನು ಬಂದಿದ್ದು, ಸದರಿ ಜಮೀನು 5 ತುಂಡುಗಳಾಗಿ ಬಂದಿದ್ದವು. 1 ಮನೆ, 1 ಖಣ ಬಂದಿರುತ್ತದೆ. ನಮ್ಮ ಸಹೋದರರು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗದಲ್ಲಿ ವಾದಿಗೆ 20 ಗುಂಟಾ ಜಮೀನನ್ನು ಅನುಭವಿಸಲು ಕೊಟ್ಟಿರುತ್ತಾರೆ. ಉಳಿದ ಜಮೀನನ್ನು ನಮ್ಮ ತಂದೆ ಇಟ್ಟುಕೊಂಡಿದ್ದಾರೆ. ಅದರ ಚಕ್ ಬಂದಿ ಹೇಳಲು ಬರುವುದಿಲ್ಲ. ಉಳಿದ ಜಮೀನಿನ ಚಕ್ ಬಂದಿಯನ್ನು ಹೇಳಲು ಬರುವುದಿಲ್ಲ. ನಮ್ಮ ತಂದೆಗೆ 1 ಕಾಲು ಎಕರೆ ಜಮೀನು ಉಳಿದಿತ್ತು. ನಮ್ಮ ತಂದೆ 1 ನೇ ಪ್ರತಿವಾದಿಯ ಜೊತೆಗೆ ಇರುವುದರಿಂದ ಅವರಿಗೆ ಉಳಿದ ಜಮೀನನ್ನು ಕೊಟ್ಟಿರುತ್ತಾರೆ. ವಾದಿಗೆ ಜಮೀನನ್ನು ಕೊಟ್ಟ ನಂತರ 1 ನೇ ಪ್ರತಿವಾದಿಗೆ ಎಷ್ಟು ವರ್ಷಗಳ ನಂತರ ಜಮೀನನ್ನು ಕೊಟ್ಟಿರುತ್ತಾರೆಂದು ನನಗೆ ನೆನಪಿರುವುದಿಲ್ಲ. 1 ನೇ ಪ್ರತಿವಾದಿಗೆ ಜಮೀನನ್ನು ಕೊಟ್ಟ ಬಗ್ಗೆ ತಾರೀಖು, ತಿಂಗಳು ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ಮನೆ ಬಿಟ್ಟು ಹೋದ ನಂತರ ಮದುವೆಯಾಗಿ, ಅವರ ಹೆಂಡತಿಯ ಮನೆಯರಿಂದ ಸ್ವಲ್ಪ ಹಣ ಮತ್ತು ಅವರು ದುಡಿದ ಹಣದಲ್ಲಿ ಜಮೀನನ್ನು ಖರೀದಿಸಿದ್ದಾರೆ. 1 ನೇ ಪ್ರತಿವಾದಿಗೆ ಸರ್ಕಾರದವರು ನಿವೇಶನ ಕೊಟ್ಟಿದ್ದು, ಸದರಿ ನಿವೇಶನದಲ್ಲಿ ವಾದಿ ಎಲ್ಲರಿಗೂ ಹಿಸ್ಸೆ ಕೊಡಬೇಕೆಂದು ಕೇಳಿದ್ದರು. ಅದಕ್ಕೆ 1 ನೇ ಪ್ರತಿವಾದಿ ಖರೀದಿಸಿದ ಜಮೀನು ಮತ್ತು ನಿವೇಶನಕ್ಕೆ ನಾವು ಮತ್ತು ನಮ್ಮ ತಂದೆ ಸಂಬಂಧ ಇರುವುದಿಲ್ಲ ಎಂದು ಹೇಳಿದ್ದೇವೆ. ಆದ್ದರಿಂದ ನಾವು

ಈವರೆಗೂ ಖಾತೆ ಮಾಡಿಕೊಂಡಿರುವುದಿಲ್ಲ. ನಮ್ಮ ತಂದೆ ಮತ್ತು ಆತನ ಸಹೋದರರು ವಿಭಾಗವಾದ ನಂತರ ಹಳೆ ಮನೆಯಲ್ಲಿ ನಾವು ಮತ್ತು 1 ನೇ ಪ್ರತಿವಾದಿ ವಾಸವಾಗಿದ್ದೆವು ಎನ್ನುವುದು ಸರಿಯಲ್ಲ. ಆ ಕಾಲಕ್ಕೆ 1 ನೇ ಪ್ರತಿವಾದಿ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದರು. ನಾನು, ನಮ್ಮ ತಂದೆ ಇದ್ದೆವು. ಮನೆ ಬಿದ್ದ ನಂತರ ವಾದಿ ಬೇರೆ ಮನೆ ಮಾಡಿಕೊಂಡು ಹೋದರು. ನಂತರ ನಮ್ಮ ತಂದೆ 1 ನೇ ಪ್ರತಿವಾದಿಯ ಮನೆಗೆ ಹೋಗಿ ಉಳಿದುಕೊಂಡಿದ್ದಾರೆ. ಜನತಾ ನಿವೇಶನದಲ್ಲಿ ಕೆಲವು ದಿನಗಳವರಗೆ ನಮ್ಮ ಚಿಕ್ಕಪ್ಪ ಮಲ್ಲೇಶಪ್ಪ ವಾಸವಾಗಿದ್ದರು ಎಂದರೆ ಸರಿ. ಅವರು ಮನೆ ಕಟ್ಟಿಕೊಳ್ಳುವರೆಗೂ ವಾಸವಾಗಿದ್ದರು. ನಮ್ಮ ಚಿಕ್ಕಪ್ಪ ಮಲ್ಲೇಶಪ್ಪ ಖಣದಲ್ಲಿ ಮನೆ ಕಟ್ಟಿಕೊಂಡು ಹೋಗಿ ವಾಸವಾಗಿದ್ದಾರೆ. ಜನತಾ ನಿವೇಶನದಲ್ಲಿ ಚಪ್ಪರ ಹಾಕಿ, ನಮ್ಮ ತಂದೆ ಮತ್ತು ಆತನ ಸಹೋದರರು ದನದ ಕೊಟ್ಟಿಗೆಯನ್ನು ಮಾಡಿಕೊಂಡಿದ್ದರು ಎಂದರೆ ಸರಿ, ಅದು ಅವರಿಗೆ ಸಂಬಂಧವಿರುದಿಲ್ಲ ಅದು ಕಾಲಿ ಇರುವುದರಿಂದ ದನದ ಕೊಟ್ಟಿಗೆ ಮಾಡಿಕೊಂಡಿದ್ದರು, ನಂತರ 1 ನೇ ಪ್ರತಿವಾದಿಗೆ ಮಂಜೂರಾಗಿದೆ. ನಮ್ಮ ಊರಿನಲ್ಲಿ ಅವರವರ ವಾಸವಾಗಿದ್ದ ಸ್ಥಳಗಳನ್ನು ಅವರಿಗೆ ಮಂಜೂರು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಜನತಾ ನಿವೇಶನದಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ನಮ್ಮ ತಂದೆ ಮತ್ತು ಆತನ ಸಹೋದರರು, ವಿಭಾಗ ಮಾಡಿಕೊಳ್ಳುವಾಗ ಜನತಾ ನಿವೇಶಕ್ಕೆ ದಾಖಲೆ ಇಲ್ಲದೇ ಇರುವುದರಿಂದ ವಿಭಾಗ ಮಾಡಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

ನಿ.ಡಿ-2 ನಮ್ಮ ತಂದೆಯ ಪಾಲಿಗೆ ಬಂದ ಹಿಸ್ಸೆ ಎಂದರೆ, ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ತಂದೆಗೆ 36X9 ಅಡಿ ಖಣ ಬಂದಿದೆ ಎಂದರೆ ಸಾಕ್ಷಿಯು, ಖಣ ಬಂದಿದೆ ಆದರೆ ಅದರ ವಿಸ್ತೀರ್ಣ ಗೊತ್ತಿರುವುದಿಲ್ಲ. ನಿ.ಪಿ-43 ಭಾವ ಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ, ಅದು ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ಚಿಕ್ಕಪ್ಪ ಮಲ್ಲೇಶಪ್ಪರವರಿಗೆ ಬಂದ ಜಾಗದಲ್ಲಿ ಮನೆ ಕಟ್ಟಿಕೊಂಡು, ಉಳಿದ ಜಾಗ ನಮ್ಮ ತಂದೆಗೆ ಬಂದಿರುತ್ತದೆ. ನಮ್ಮ ಚಿಕ್ಕಪ್ಪ ಮಲ್ಲೇಶಪ್ಪ ವಿಭಾಗದ ನಂತರ ಕೆಲ ದಿನಗಳವರಗೆ ಸರ್ಕಾರಿ ಜಾಗದಲ್ಲಿ ಗುಡಿಸಲು ಹಾಕಿಕೊಂಡು ವಾಸವಾಗಿದ್ದರು. ಅವರಿಗೆ ಬಂದ ಖಣದ ಜಾಗದಲ್ಲಿ ಮನೆ ಕಟ್ಟಿಕೊಂಡು ಹೋಗಿದ್ದಾರೆ. ಮಲ್ಲೇಶಪ್ಪ ಮತ್ತು ಬಸಪ್ಪ ಎನ್ನುವವರಿಗೆ ಜನತಾ ನಿವೇಶನದಲ್ಲಿ ಬಂದ ಹಿಸ್ಸೆಯನ್ನು ನಾವು ತೆಗೆದುಕೊಂಡು ನಮಗೆ ಬಂದ ಖಣದ ಜಾಗವನ್ನು ಅವರಿಗೆ ಬಿಟ್ಟುಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. 2 ಉಳಿದ ಹಿಸ್ಸೆಗಳನ್ನು ನಾಗರಾಜಪ್ಪನಿಗೆ ರೂ.4 ವರೆ ಸಾವಿರ ರೂಪಾಯಿಗಳನ್ನು ಮತ್ತು ಪಂಚಪ್ಪನಿಗೆ ರೂ.9 ಸಾವಿರ ರೂಗಳನ್ನು ಕೊಟ್ಟು, ಅವರ ಹಿಸ್ಸೆಗಳನ್ನು ನಾವೇ ಖರೀದಿಸಿದ್ದೇವೆ ಎನ್ನುವುದು ಸರಿಯಲ್ಲ. ವಾದಿ ಟ್ರಾಕ್ಟರ್ ಮತ್ತು ಮೋಟರ್ ಸೈಕಲ್ ನ್ನು ಚಲಾಯಿಸುತ್ತಾರೆ. ವಾದಿ ಟ್ರಾಕ್ಟರ್ ನಲ್ಲಿ ನಾವು ಚಿಕ್ಕವರಿದ್ದಾಗ ಹೊಲ ಗದ್ದೆಗಳಿಗೆ ಕರೆದುಕೊಂಡು ಹೋಗಿದ್ದರ ಬಹುದು, ಆದರೆ ಯಾವ ಟ್ರಾಕ್ಟರ್ ಅಂತ

ವಕೀಲರಿಗೆ ಮರು ಪರೀಕ್ಷೆ ಹಾಕಿದ್ದಾರೆ. ಬೇರೆಯವರ ಟ್ರಾಕ್ಟರ್ ಗಳು ನಮ್ಮ ಹೊಲದ ಹತ್ತಿರ ಹೋಗುತ್ತಿದ್ದವು, ಅಂತಹ ಟ್ರಾಕ್ಟರ್ ನಲ್ಲಿ ಹೋಗಿದ್ದೇವೆ. ಪ್ರತಿವಾದಿಯ ಟ್ರಾಕ್ಟರ್ ನ್ನು ವಾದಿಯು ಚಲಾಯಿಸಿರುವುದಿಲ್ಲ. ನಾವು ಕೋಡಿಹಳ್ಳಿ ಜಮೀನಿಗೆ ಕೆಸಲ ಮಾಡಲು ಹೋಗಿರುವುದಿಲ್ಲ. ಉಳಿದ ಪ್ರತಿವಾದಿಯರು ಹೋದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಟ್ರಾಕ್ಟರ್ ನ್ನು, ತೆಗೆದುಕೊಂಡು 3 ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಚಿಕ್ಕವರಿದ್ದಾಗಲೇ ಮನೆಯಿಂದ ಹೊರ ಹೋಗಿ, ಬೇರೆಯವರ ಜಮೀನಿನಲ್ಲಿ ಕೆಲಸ ಮಾಡಿದ್ದಾರೆಂದು ಹೇಳಿದ್ದು, ಯಾರ ಜಮೀನು ಎಂದು ಗೊತ್ತಿಲ್ಲ. ಸರ್ವೆ ನಂಬರ್ 18 ರ ಜಮೀನಿನಲ್ಲಿ ಎಲೆ ತೋಟ ಇತ್ತು ಎಂದರೆ ಸರಿ. ನಮ್ಮ ತಂದೆ ಎಲೆ ತೋಟ ಮಾಡುತ್ತಿದ್ದರು. ಆ ಜಮೀನಿನಲ್ಲಿ ಮೊದಲು ಬೋರ್ ವೆಲ್ ಇರಲಿಲ್ಲ. ನಮ್ಮ ಚಿಕ್ಕಪ್ಪನ ಜಮೀನಿನಲ್ಲಿರುವ ಬೋರ್ ವೆಲ್ ನಿಂದ ನೀರು ಹಾಯಿಸಿಕೊಳ್ಳುತ್ತಿದ್ದರು. ಸರ್ವೆ ನಂಬರ್ -29 ರ ಜಮೀನಿನಲ್ಲಿ ಕಬ್ಬು, ಹತ್ತಿ ಮತ್ತು ಮೆಕ್ಕೆ ಜೋಳ ಬೆಳೆಯುತ್ತಿದ್ದರು ಎಂದರೆ ಕಬ್ಬು ಬೆಳೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಬೋರ್ ವೆಲ್ ಇರಲಿಲ್ಲ. ಒಟ್ಟಿಗೆ ಒಂದು ಬೋರ್ ವೆಲ್ ಇದ್ದು ಒಟ್ಟಿಗೆ ನೀರು ಹಾಯಿಸುತ್ತಿದ್ದರು. 2 ಜಮೀನುಗಳ ಆಧಾಯದಿಂದ ಮತ್ತು ನಾವು ದುಡಿದ ಹಣದಿಂದ ಕೋಡಿಹಳ್ಳಿ ಜಮೀನನ್ನು ಖರೀದಿಸಿದ್ದೇವೆ ಎನ್ನುವುದು ಸರಿಯಲ್ಲ. ನಾವು ದುಡಿದ ಹಣ ನಮಗೆ ಮಾತ್ರ ಸಾಕಾಗುತ್ತಿತ್ತು. ವಾದಿ ಮತ್ತು 1 ನೇಪ್ರತಿವಾದಿ ಮನೆಯಿಂದ ಹೊರಗೆ ಹೋಗಿದ್ದರಿಂದ ನಮ್ಮ ತಂದೆ ಜಮೀನನ್ನು ಮಾರಾಟ ಮಾಡಿ, ಮದುವೆ ಮಾಡಿದ್ದಾರೆ. ಒಟ್ಟು ಕುಟುಂಬದ ಮಂಚ, ಬೀರು, ಹಂಡೆ 1 ನೇ ಪ್ರತಿವಾದಿಯ ಮನೆಯಲ್ಲಿವೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.